# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 211/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 12-05-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಶಿವರುದ್ರಪ್ಪ ಅಲಿಯಾಸ್ ಶಿವನಪ್ಪ ಕಳ್ಳಿಮನಿ | **ಪ್ರಾ.ಸಾ ಃ 05** |
| **ತಂದೆ ಃ ಗಂಡ ಹೆಸರು** | ಃ | ಬಸವಣ್ಣೆಪ್ಪ | **ಚಾ.ಸಾ ಃ 09** |
| **ವಯಸ್ಸು** | ಃ | 55 ವರ್ಷ | |
| **ಉದ್ಯೋಗ** | ಃ | ವ್ಯವಸಾಯ | |
| **ವಾಸಸ್ಥಳ** | ಃ | ವಿಟ್ಲಾಪುರ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಚಾಸಾ-1 ಪರಿಚಯ ಇಲ್ಲ. ಚಾಸಾ-8 ನನ್ನ ಅಣ್ಣ. ಚಾಸಾ-10 ನನ್ನ ಇನ್ನೊಬ್ಬ ಅಣ್ಣ. ಸುಮಾರು 2 ವರ್ಷಗಳ ಹಿಂದೆ ಚಾಸಾ-10 ರವರು ಮೃತಪಟ್ಟಿದ್ದಾರೆ. ನನಗೆ ಆರೋಪಿಯ ಪರಿಚಯ ಇದೆ. ಆರೋಪಿ ನನ್ನ ಅಣ್ಣನ ಮಗ.

ಸುಮಾರು ಒಂದುವರೆ ವರ್ಷಗಳ ಹಿಂದೆ ನನ್ನ ಅಣ್ಣ ಚಾಸಾ-10 ರವರಿಗೆ ಪಾರ್ಶುವ ವಾಯು ಹೊಡೆದಿದ್ದರಿಂದ ಆತನನ್ನು ಕಾರವಾರ ಜಿಲ್ಲೆ ಅಳಗಾ ಗ್ರಾಮಕ್ಕೆ ಆಸ್ಪತ್ರೆಗೆ ಕೆರದುಕೊಂಡು ಹೋಗಿ ಬರುವಾಗ ಅಪಘಾತವಾಗಿರುತ್ತದೆ. ನಾನು, ಚಾಸಾ-8 ಹಾಗೂ ಚಾಸಾ-10 ರವರ ಮಗ ಪ್ರಕಾಶ ಆಸ್ಪತ್ರೆಗೆ ಕಾರಿನಲ್ಲಿ ಹೋಗಿದ್ದೆವು. ಸದರಿ ಕಾರನ್ನು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಚಲಾಯಿಸುತ್ತಿದ್ದ. ಹೊತ್ತು ಮುಳಗಿದಾಗ ನಾವು ಬರುತ್ತಿದ್ದಾಗ ಜುಂಜುನಬೈಲದ ಒಬ್ಬ ವ್ಯಕ್ತಿ ಕಾರಿಗೆ ಮೊಟರ ಸೈಕಲನಿಂದ ಡಿಕ್ಕಿ ಪಡಿಸಿರುತ್ತಾನೆ. ನಾವು ಕಾರವಾರದಿಂದ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಗೆ ಹೋಗುತ್ತಿದ್ದೆವು. ಮೋಟರ ಸೈಕಲ ಸವಾರ ಹುಬ್ಬಳ್ಳಿ ಕಡೆಯಿಂದ ಬರುತ್ತಿದ್ದ. ಮೋಟರ ಸೈಕಲ ಸವಾರ ಸ್ಥಳದಲ್ಲಿ ಮೃತಪಟ್ಟಿದ್ದ. ಕಾರಿನಲ್ಲಿ ಮುಂದೆ ಕುಳಿತಿದ್ದ ಚಾಸಾ-8 ರವರ ಮುಖಕ್ಕೆ ಗಾಯಗಳಾಗಿದ್ದವು. ನಮಗೂ ಕೂಡಾ ಸಣ್ಣ ಪುಟ್ಟ ಗಾಯಗಳಾಗಿದ್ದವು. ಪೋಲೀಸರು ನಮ್ಮನ್ನು ಒಂದು ಬಸ್ಸಿನಲ್ಲಿ ಹಾಕಿ ಕಿಮ್ಸ ಹುಬ್ಬಳ್ಳಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ನಾನು ಅಪಘಾತದ ಕುರಿತು ಪೋಲೀಸರ ಮುಂದೆ ಹೇಳಿಕೆ ನೀಡಿಲ್ಲ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,*** *ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 06.10.2022 ರಂದು ಕಾರ ನಂ ಕೆಎ 42/ಎ 5975 ರಲ್ಲಿ ಕರೆದುಕೊಂಡು ಹೋಗಿ ಮರಳಿ ಬರುತ್ತಿದ್ದೆವು ಎಂದರೆ ನಿಜ. ಕಾರನ್ನು ಆರೋಪಿ ಚಲಾಯಿಸುತ್ತಿದ್ದ ಎಂದರೆ ನಿಜ. ಆರೋಪಿ ಕಾರನ್ನು ಅತೀ ವೇಗವಾಗಿ ಮತ್ತು ಅಜಾಗೂರಕತೆಯಿಂದ ಚಲಾಯಿಸಿಕೊಂಡು ಬರುತ್ತಿದ್ದಾಗ ಹುಬ್ಬಳ್ಳಿ ಕಾರವಾರ ರಸ್ತೆ ಮೇಲೆ ಕಲಘಟಗಿ ಸಮೀಪ ಜ್ಯೆ ಹಿಂದ ದಾಬಾ ಹತ್ತಿರ ಸಾಯಂಕಾಲ 6-00 ಗಂಟೆಗೆ ಆರೋಪಿ ತನ್ನ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಟಿ ವಿ ಎಸ್ ಎಕ್ಸಲ್ ನಂ ಕೆಎ 25/ಇವಾಯ್ 7616 ಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ

ಎನ್ನುತ್ತಾರೆ. ಅಪಘಾತದಲ್ಲಿ ಗಾಯಗೊಂಡ ಗಾಯಾಳು ನಾರಾಯಣ ತಂದೆ ಯಲ್ಲಪ್ಪ ಕಾಸರ ಸ್ಥಳದಲ್ಲಿ ಮೃತಪಟ್ಟಿರುತ್ತಾನೆ ಎಂದರೆ ನಿಜ. ಆರೋಪಿ ಅಪಘಾತವಾದ ನಂತರ ಹೆದರಿ ಸ್ಥಳದಿಂದ ಓಡಿ ಹೋಗಿರುತ್ತಾನೆ ಎಂದರೆ ನಿಜ. ನನಗೆ, ಚಾಸಾ-8 ಹಾಗೂ ಚಾಸಾ-10 ರವರಿಗೆ ಅಪಘಾತದಲ್ಲಿ ಯಾವುದೆ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾವು ಬೇರೆ ವಾಹನ ಮಾಡಿಕೊಂಡು ಚಾಸಾ-10 ರವರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದರೆ ನಿಜ. ಮೃತನ ಮಗ ಚಾಸಾ-1 ರವರು ಈ ಬಗ್ಗೆ ದೂರು ನೀಡಿರುತ್ತಾರೆ ಎಂದರೆ ನಿಜ. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ನಿಜ. ಅಪಘಾತವು ಆರೋಪಿಯ ನಿರ್ಲಕ್ಷತನದಿಂದ ಆಗಿದ್ದರೂ ಕೂಡಾ ಆತ ನನ್ನ ಸಂಬಂಧಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ ಆರ್ ಜಿ ವಕೀಲರಿಂದಃ**

ದೂರನ್ನು ಯಾರು ಕೊಟ್ಟಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ ಎಂದರೆ ನಿಜ. ಅಪಪಘಾತ ಹೇಗೆ ಆಗಿದೆ ಎಂದು ನನಗೆ ವಯಕ್ತಿಕ ಗೊತ್ತಿಲ್ಲ ಎಂದರೆ ನಿಜ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಪೋಲೀಸರು ನನ್ನ ಸಹಿ ಪಡೆದುಕೊಂಡಿಲ್ಲ. ಆರೋಪಿ ವಾಹನವನ್ನು ಸರಿಯಾಗಿ ಚಲಾಯಿಸಿಕೊಂಡು ಹೋಗಿದ್ದು ಎದುರಿನಿಂದ ಬುರುತ್ತಿದ್ದ ಮೋಟರ ಸೈಕಲ ಸವಾರ ತಪ್ಪು ದಿಕ್ಕಿನಲ್ಲಿ ಬಂದು ಅಪಘಾತ ಪಡಿಸಿದ್ದಾನೆ ಎನ್ನುವದು ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**